ಮುಂದುವರಿಸಲು ಸೂಚನೆ ಬಂದ ತಕ್ಷಣ ಈ ಖಾಲಿ ಹುದ್ದೆಗಳ ಭರ್ತಿಗೆ ಕೂಡಲೇ ಕ್ರಮ ಜರುಗಿಸಲಾಗುವುದು.

12.00 ಪಿ.ಎಂ.

ಉಪಾಧ್ಯಕ್ಷರು : ಮಾನ್ಯ ಯೋಗಿಶ್ ಭಟ್‌ರವರು.

ಶ್ರೀ ಎನ್. ಯೋಗಿಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ನಗರಾಭಿವೃದ್ಧಿ ಇಲಾಖೆಯ ಸಚಿವರೇ ಇಲ್ಲಿ ಕಾಣುತ್ತಿಲ್ಲ, ಉತ್ತರ ಕೊಡಬೇಕಾಗಿರುವವರು ಅವರು. ಆದ್ದರಿಂದ ದಯವಿಟ್ಟು ಅವರನ್ನು ಇಲ್ಲಿಗೆ ಕರೆಯಿಸಿ.

ಉಪಾಧ್ಯಕ್ಷರು : ಆಮೇಲೆ ಅವರನ್ನು ಕರೆಯಿಸುತ್ತೇನೆ.

ರಾಜ್ಯದಲ್ಲಿ ಭೂನ್ಯಾಯ ಮಂಡಳಿಗಳ ಪುನರ್‌ರಚನೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಭೂಸುಧಾರಣೆ ಶಾಸನ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಾಗಿನಿಂದ ರಾಜ್ಯದ ವಿವಿಧ ಭೂ ನ್ಯಾಯ ಮಂಡಳಿಗಳಲ್ಲಿ ದಾಖಲಾದ ಪ್ರಕರಣಗಳು ಇತ್ಯರ್ಥವಾಗದಿರುವುದರಿಂದ ಅನೇಕರು ರಾಜ್ಯ ಹೈಕೋರ್ಟಿಗೆ ಹೋಗುವುದು ಮತ್ತು ಅಲ್ಲಿ ಪುನರ್ ಪರಿಶೀಲನೆಗಾಗಿ ಆದೇಶ ಹೊಂದಿ ಅದೇ ಭೂ ನ್ಯಾಯ ಮಂಡಳಿಗಳಿಗೆ ಬಂದಿರುವುದು. ಪುನಃ ಇತ್ಯರ್ಥಕ್ಕಾಗಿ ಮತ್ತೆ ಹೈಕೋರ್ಟಿಗೆ ಹೋಗುವುದು, ಈ ರೀತಿಯ ಗ್ರಾಮೀಣ ಪ್ರದೇಶದ ರೈತರ ಅಲೆದಾಟವನ್ನು ತಪ್ಪಿಸುವ ಸಲುವಾಗಿ ಮತ್ತು ಶ್ರಮ, ಹಣ ಮತ್ತು ಸಮಯ ವ್ಯರ್ಥವಾಗದಂತೆ ಅವರಿಗೆ ಶೀಘ್ರ ನ್ಯಾಯವನ್ನು ದೊರಕಿಸುವ ಸಲುವಾಗಿ ಅಪಲೆಟ್ ಟ್ರಿಬ್ಯುನಲ್‌ಗಳನ್ನು ರಚಿಸಬೇಕಾಗಿರುತ್ತದೆ. ಇದಕ್ಕಾಗಿ ಸರ್ಕಾರವು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯ ಪಡಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ಮತ್ತು ವಿವಿಧ ಇನಾಂ ರದ್ದಿಯಾತಿ ಕಾಯಿದೆಗಳಡಿಯಲ್ಲಿ ನಿರ್ಣಯವಾದ ಗೇಣಿ ಪ್ರಕರಣಗಳು ಮೇಲ್ಮನವಿ ಮೇರೆಗೆ ಅದರಲ್ಲೂ ಉಚ್ಚ ನ್ಯಾಯಾಲಯದಲ್ಲಿ ಬಹಳ ಸಂಖ್ಯೆಯಲ್ಲಿ ಅಧಿಕ ಅವಧಿಗೆ ವಿಲೇವಾರಿಯಾಗದೇ ಉಳಿದಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ಸಮಾಜದಲ್ಲಿನ ದುರ್ಬಲ ವರ್ಗದವರ ಸಂಕಷ್ಟ ಬಗೆಹರಿಸುವ ಸಲುವಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ನಿರ್ಧರಿಸಿತು.

ಅದರಂತೆ ಭಾರತ ಸಂವಿಧಾನ ಅನುಚ್ಛೇದ 323(ಬಿ) ಅನುಸರಿಸಿ ಕರ್ನಾಟಕ ಭೂ ಸುಧಾರಣೆ ಕಾಯಿದೆಯಡಿ ಇತ್ಯರ್ಥದಲ್ಲಿರುವ ಯಾವುದೇ ಗೇಣಿದಾರಿಕೆ ವಿವಾದಗಳ ಮತ್ತು ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಇನಾಂಗಳ ರದ್ದಿಯಾತಿ ಅಧಿನಿಯಮಗಳಡಿಯ ಗೇಣಿದಾರಿಕೆ ಬಗ್ಗೆ ಅಥವಾ ಅದರಲ್ಲಿನ ಯಾವುದೇ ಹಕ್ಕುಗಳಿಗೆ ಸಂಬಂಧಿಸಿದಂತೆ ಹಾಗೂ ಇತರ ರೀತಿಯಲ್ಲಿ ಹೂಡಲಾದ ಮೊಕದ್ದಮೆಗಳ ನ್ಯಾಯ ನಿರ್ಣಯ ಮಾಡಲು ಅಥವಾ ವಿಚಾರಣೆ ನಡೆಸಲು ಕರ್ನಾಟಕ ವಿಶೇಷ ನ್ಯಾಯಾಧೀಕರಣ ಅಧಿನಿಯಮ, 1994ಕ್ಕೆ ದಿನಾಂಕ ಅಕ್ಟೋಬರ್ 11, 1994ರಂದು ಸನ್ಮಾನ್ಯ ರಾಜ್ಯಪಾಲರ ಅನುಮೋದನೆ ಪಡೆದು ಕಾಯಿದೆ ರಚಿಸಲಾಗಿದೆ. ಸದರಿ ಕಾಯಿದೆಯಲ್ಲಿ ರಚಿತವಾಗುವ ವಿಶೇಷ ನ್ಯಾಯಾಧೀಕರಣಗಳು ಸರ್ವೋಚ್ಚ ನ್ಯಾಯಾಲಯ ಹೊರತುಪಡಿಸಿ ಮತ್ತಾವುದೇ ನ್ಯಾಯಾಲಯ ಪ್ರವೇಶಿಸದಂತೆ ಪ್ರಸ್ತಾಪಿತ ಪ್ರಕರಣಗಳ ಇತ್ಯರ್ಥ ಮಾಡುವ ಅಧಿಕಾರ ಹೊಂದಿರುತ್ತದೆ.

ಮೇಲಿನ ಕಾಯಿದೆಗೆ ನಿಯಮಗಳನ್ನು ರಚಿಸುವ ಕೆಲಸ ಅಂತಿಮ ಹಂತದಲ್ಲಿದೆ. ಅಲ್ಲದೆ, ಬೆಂಗಳೂರಿನಲ್ಲಿ ವಿಶೇಷ ನ್ಯಾಯಾಧೀಕರಣದ ಮೂಲ ಪೀಠವನ್ನು ಮತ್ತು

ಉಪಪೀಠಗಳನ್ನು ಮೂರು ವಿಭಾಗೀಯ ಕೇಂದ್ರಗಳಲ್ಲಿ ಸ್ಥಾಪಿಸಬೇಕೆ ಎಂಬ ಬಗ್ಗೆ ತ್ವರಿತವಾಗಿ ತೆಗೆದುಕೊಳ್ಳಲಾಗುವುದು.

ಮಾನ್ಯ ಅಧ್ಯಕ್ಷರೇ, ಸುಮಾರು 13 ಸಾವಿರ ಇಂಥ ಪ್ರಕರಣಗಳು ಇತ್ಯರ್ಥಕ್ಕಾಗಿ ಹೈಕೋರ್ಟ್‌ನವರ ಮುಂದೆ ಇವೆ. ಈಗ ಈ ವಿಷಯದಲ್ಲಿ 2 ಪ್ರಶ್ನೆಗಳು ನಮ್ಮ ಮುಂದೆ ಉದ್ಭವವಾಗುತ್ತವೆ. ಒಂದನೆಯದಾಗಿ ವಿಶೇಷ ನ್ಯಾಯ ಪೀಠವನ್ನು ರಚಿಸಿ ಹೈಕೋರ್ಟ್‌ನಲ್ಲಿ ಇದನ್ನು ಬಗೆಹರಿಸಲು ಸಾಧ್ಯವೇ ಎಂಬುದನ್ನು ನಮ್ಮ ಮಾನ್ಯ ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರೊಡನೆ ಮಾತನಾಡುವವರಿದ್ದಾರೆ. ಒಂದು ಸಮಯ ಈ ರೀತಿ ಮಾಡಲು ಆಗದೇ ಇದ್ದ ಪಕ್ಷದಲ್ಲಿ ಒಂದು ಅಥವಾ ಎರಡು ನ್ಯಾಯ ಪೀಠಗಳನ್ನು ಹೊಂದಿದಂಥ ಅಪಿಲೇಟ್ ಟ್ರಿಬ್ಯುನಲ್‌ಗಳನ್ನು ರಚಿಸಿ ಇದನ್ನು ಸಾಧ್ಯವಾದಷ್ಟು ಬೇಗ ಮುಗಿಸಲು ತೀರ್ಮಾನ ಮಾಡಿದ್ದೇನೆ.

ಉಪಾಧ್ಯಕ್ಷರು : ಶ್ರೀ ಯು.ಬಿ. ಬಣಕಾರ್....

ಶ್ರೀ ಯು.ಬಿ. ಬಣಕಾರ್ : ಸನ್ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಅದರಲ್ಲೂ ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಕೊರತೆಯಿಂದ ಸಾರ್ವಜನಿಕರಿಗೆ, ದನಕರುಗಳಿಗೆ ಬಹಳ ತೊಂದರೆಯುಂಟಾಗಿದ್ದು ಅದನ್ನು ಬಗೆಹರಿಸಲು ಧಾರವಾಡ ಜಿಲ್ಲಾ ಪಂಚಾಯತ್ ....

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ನಾಳೆ ಒದಗಿಸಿಕೊಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಯೋಗೀಶ್ ಭಟ್‌ರವರದ್ದನ್ನು ಮತ್ತು ಶ್ರೀ ಯು.ಬಿ. ಬಣಕಾರ್‌ರವರ ವಿಚಾರಕ್ಕೆ ಉತ್ತರವನ್ನು ನಾಳೆ ಒದಗಿಸಿ.

(3) ಮೆಗನಾನ್ ಆಸ್ಪತ್ರೆಯ ಡಾ. ಆನಂದ್ ಅವರ ನಡವಳಿಕೆಗೆ ಸೂಕ್ತ ಕ್ರಮ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಮೆಗನಾನ್ ಆಸ್ಪತ್ರೆಯ ಅರವಳಿಕೆ ವೈದ್ಯರಾದ ಡಾ|| ಆನಂದ್‌ರವರ ಈ ಕೆಳಕಂಡ ವಿಚಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಅಧರಲ್ಲಿ ಹಾಜರಿ ಪುಸ್ತಕದಲ್ಲಿ ತಿದ್ದಿರುವ ಬಗ್ಗೆ ಜಿಲ್ಲಾ ಸರ್ಜನ್ ನೋಟಿಸ್ ಕೊಟ್ಟಿರುವ ಬಗ್ಗೆ, ಧಿಡೀ ಹಾಕದೇ ಆಸ್ಪತ್ರೆಗೆ ಬರದಿರುವ ಬಗ್ಗೆ, ಆಪರೇಶನ್‌ಗೆ ಆಗಾಗ್ಗೆ ಅವಶ್ಯಕವಾಗಿ ಇರಲೇಬೇಕಾದ ವೈದ್ಯರು ಹಾಜರಾಗದೇ ಇರುವ ಬಗ್ಗೆ, ಜಿಲ್ಲಾ ಸರ್ಜನ್‌ಗಳು ಕೊಟ್ಟಿರುವ ನೋಟಿಸ್‌ಗಳ ಬಗ್ಗೆ ಅಲಕ್ಷ್ಯವನ್ನು ತೋರಿಸಿ ಮೇಲ್ಕಾಣಿಸಿರುವ ತಪ್ಪುಗಳನ್ನು ಮಾಡಿರುವ ಡಾ|| ಆನಂದ್‌ರವರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಿರಾ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಉಪಾಧ್ಯಕ್ಷರೇ,

ಡಾ. ಆನಂದರವರು, ದಿನಾಂಕ 26-4-1970ರಿಂದ ಈ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಸದರಿಯವರು ಎಂ.ಡಿ. (ಅರವಳಿಕೆ) ವಿದ್ಯಾರ್ಹತೆ ಹೊಂದಿದ್ದು ಎಲ್ಲಾ ಶಸ್ತ್ರ ಚಿಕಿತ್ಸಾ ಸಂದರ್ಭಗಳಲ್ಲಿ ಇವರ ಸೇವೆಯು ಅವಶ್ಯವಿರುತ್ತದೆ. ಸದರಿಯವರು ದಿನಾಂಕ 30-1-1986ರಿಂದ ಶಿವಮೊಗ್ಗದ ಮೆಗ್ಗಾನ್ ಜಿಲ್ಲಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.

ಡಾ. ಆನಂದರವರು, 1987ರಲ್ಲಿ ಒಮ್ಮೆ ಹಾಜರಿ ಪುಸ್ತಕವನ್ನು ತಿದ್ದಿದ್ದ ಪ್ರಕರಣ ಗಮನಕ್ಕೆ ಬಂದಿದ್ದು ಅದರ ಬಗ್ಗೆ ಸೂಚನೆ ಹಾಗು ಸೂಕ್ತ ತಿಳುವಳಿಕೆ ನೀಡಲಾಗಿದೆ. ಇವರು ದಿನಾಂಕ 31-1-91 ರಿಂದ 30-5-91ರವರೆಗೆ ನಾಲ್ಕು ತಿಂಗಳ ಕಾಲ ಸೇವೆಗೆ ಗೈರು ಹಾಜರಾಗಿದ್ದರು. ಈ ಸಂಬಂಧದಲ್ಲಿ ವಿಷಯದ ಪೂರ್ಣ ಪರಿಶೀಲನೆ ನಂತರ